ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ
UNIVERSITY OF HORTICULTURAL SCIENCES, BAGALKOT
ICAR - KRISHI VIGYAN KENDRA, KOLAR
ಐಸಿಎಆರ್ – ಕೃಷಿ ವಿಜ್ಞಾನ ಕೇಂದ್ರ, ಕೋಲಾರ



# e- NEWS LETTER / ಇ–ವಾರ್ತಾ ಪತ್ರಿಕೆ

ಸಂಚಿಕೆ: 04 | ಜನವರಿ– ಮಾರ್ಚ–2021 | ಸಂಪುಟ: 13

## ಗೌರವಾನ್ವಿತ ಕುಲಪತಿಗಳ ನುಡಿಗಳು



ಡಾ. ಕೆ. ಎಮ್. ಇಂದಿರೇಶ್

ಕೃಷಿ ವಿಜ್ಞಾನ ಕೇಂದ್ರವು ವಿವಿಧ ಮುಂಚೂಣಿ ಪ್ರಾತ್ಯಕ್ಷಿಕೆಗಳು ಹಾಗು ತಂತ್ರಜ್ಞಾನ ಮರುಪರಿಶೀಲನೆಗಳ ಜೊತೆಗೆ ತಾಂತ್ರಿಕತೆಯ ಹಸ್ತಾಂತರ, ಅಂತರ್ಜಾಲದ ಮೂಲಕ ಈ ತೋಟಗಾರಿಕೆ ಮೇಳದ ನೇರ ಪ್ರದರ್ಶನ, 5 ದಿನಗಳ ಕಾಲ ರೈತ ಮಹಿಳೆಯರಿಗೆ ತ್ಯಾಜ್ಯ ರೇಷ್ಮೆ ಗೂಡಿನಿಂದ ಹಾರ, ಹೂಗುಚ್ಛ, ಹೂಕುಂಡ ತಯಾರಿಸುವ ತರಬೇತಿ ಕಾರ್ಯಕ್ರಮ, ಪಶು ಆರೋಗ್ಯ ಶಿಬಿರಗಳು, ಕೃಷಿ ಇಲಾಖೆ, ಕೋಲಾರ ಆಯೋಜಿಸಿದ ರೈತರೊಂದಿಗೊಂದು ದಿನದಲ್ಲಿ ವಿಶ್ವವಿದ್ಯಾಲಯದ ನೂತನ ತಂತ್ರಜ್ಞಾನಗಳನ್ನು ಮಳಿಗೆಯಲ್ಲಿ ಪ್ರದರ್ಶಿಸಿದ್ದು, ರಾಷ್ಟ್ರೀಯ ತೋಟಗಾರಿಕೆ ಮೇಳದಲ್ಲಿ ಭಾಗವಹಿಸಿದ್ದು, ಅರ್ಥಪೂರ್ಣವಾಗಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗು ವಿಶ್ವ ನೀರು ದಿನಾಚರಣೆಯ ಆಚರಣೆ, 25 ಹೊರಾಂಗಣ ತರಬೇತಿ ಕಾರ್ಯಕ್ರಮಗಳು, 7 ಒಳಾಂಗಣ ತರಬೇತಿಗಳು, ವಿಜ್ಞಾನಿಗಳು ವಿವಿಧ ತರಬೇತಿ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿರುವುದು, ಸಮಸ್ಯಾತ್ಮಕ ಕ್ಷೇತ್ರಗಳಿಗೆ ಭೇಟಿನೀಡಿರುವುದು, ಗುಂಪು ಚರ್ಚೆಗಳು, ಪದ್ಧತಿ ಪ್ರಾತ್ಯಕ್ಷಿಕೆಗಳು ಹಾಗು ರೇಡಿಯೋ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವುದು ಶ್ಲಾಘನೀಯ. ಕೆವಿಕೆಯು ನೂತನ ಆಡಳಿತ ಭವನವನ್ನು ಹೊಂದಿದ್ದು ಸಂತೋಷದಾಯಕ ವಿಷಯ. ಮುಂಬರುವ ದಿನಗಳಲ್ಲಿ ಕೈಗೊಳ್ಳುವ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

## ಕೆವಿಕೆಯ ನೂತನ ಆಡಳಿತ ಭವನದ ಪೂಜೆ

ನೂತನವಾಗಿ ನಿರ್ಮಿಸಿದ ಕೃಷಿ ವಿಜ್ಞಾನ ಕೇಂದ್ರದ ಆಡಳಿತ ಭವನದ ಪೂಜೆಯನ್ನು ದಿನಾಂಕ 15.03.2021 ರಂದು ಕೈಗೊಳ್ಳಲಾಯಿತು. ಗೌರವಾನ್ವಿತ ಕುಲಪತಿಗಳು ಡಾ. ಕೆ.ಎಂ. ಇಂದಿರೇಶ್, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ, ಡಾ. ಎಸ್.ಐ. ಅಥಣಿ, ವಿಸ್ತರಣಾ ನಿರ್ದೇಶಕರು, ತೋ.ವಿ.ವಿ, ಬಾಗಲಕೋಟೆ, ಡಾ. ಬಿ.ಜಿ. ಪ್ರಕಾಶ್, ಡೀನ್, ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ, ಡಾ. ಟಿ.ಬಿ. ಬಸವರಾಜು, ಸಹವಿಸ್ತರಣಾ ನಿರ್ದೇಶಕರು (ದ), ಮತ್ತು ಡಾ.ಆರ್.ಕೆ.ರಾಮಚಂದ್ರ, ಮುಖ್ಯಸ್ಥರು, ತೋಟಗಾರಿಕೆ ವಿಸ್ತರಣಾ ಮತ್ತು ಸಂಶೋಧನಾ ಕೇಂದ್ರ, ಹೊಗಳಗೆರೆ ರವರು ಉಪಸ್ಥಿತರಿದ್ದರು. ಕೃಷಿ ವಿಜ್ಞಾನ ಕೇಂದ್ರ ಹಾಗೂ ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರದ ಎಲ್ಲ ಸಿಬ್ಬಂದಿವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.





## ತಾಂತ್ರಿಕತೆಯ ಹಸ್ತಾಂತರ



ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರ, ಟಮಕ ಕೋಲಾರದಲ್ಲಿ ಅಭಿವೃದ್ಧಿ ಪಡಿಸಿರುವ "ಕಬ್ಬಿಣಾಂಶಭರಿತ ಸಿರಿಧಾನ್ಯದ ಆರೋಗ್ಯ ಪೇಯ'ದ ತಾಂತ್ರಿಕತೆಯನ್ನು ತೋಟಗಾರಿಕೆ ವಿಜ್ಞಾನಿಗಳ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿಗಳಾದ ಡಾ. ಕೆ.ಎಂ. ಇಂದಿರೇಶ್ ರವರು, ಶ್ರೀಮತಿ ರತ್ನಮ್ಮ, ವ್ಯವಸ್ಥಾಪಕರು, ವೇದಿಕ್ ಎಂಟರ್‌ಪ್ರೈಜಸ್‌ರವರಿಗೆ ದಿನಾಂಕ 15.03.2021 ರಂದು ಹಸ್ತಾಂತರಿಸಿದರು. ಸಮಾರಂಭದಲ್ಲಿ ಡಾ. ಎಸ್.ಐ. ಅಥಣಿ, ವಿಸ್ತರಣಾ ನಿರ್ದೇಶಕರು, ತೋಟಗಾರಿಕೆ ವಿಜ್ಞಾನಿಗಳ ವಿಶ್ವವಿದ್ಯಾಲಯ, ಬಾಗಲಕೋಟೆ, ಡಾ. ಟಿ.ಬಿ. ಬಸವರಾಜ, ಸಹ ವಿಸ್ತರಣಾ ನಿರ್ದೇಶಕರು (ದಕ್ಷಿಣ), ತೋ.ಮ.ವಿ, ಕೋಲಾರ, ಡಾ. ಬಿ.ಜಿ. ಪ್ರಕಾಶ್, ಡೀನ್, ತೋ.ಮ.ವಿ, ಕೋಲಾರ, ಕೆ. ತುಳಸಿರಾಮ್, ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು, ಡಾ. ಚಿಕ್ಕಣ್ಣ ಜಿ.ಎಸ್, ವಿಜ್ಞಾನಿ (ಗೃಹ ವಿಜ್ಞಾನ) ಹಾಗೂ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಉಪಸ್ಥಿತರಿದ್ದರು.

## ತೋಟಗಾರಿಕೆ ಮೇಳ



ತೋಟಗಾರಿಕೆ ವಿಜ್ಞಾನಿಗಳ ವಿಶ್ವವಿದ್ಯಾಲಯ ಬಾಗಲಕೋಟವು 2020-21 ಸಾಲಿನ ತೋಟಗಾರಿಕೆ ಮೇಳವನ್ನು ದಿನಾಂಕ 02.01.2021 ರಿಂದ 04.01.2021 ರವರೆಗೆ ಬಾಗಲಕೋಟೆಯಲ್ಲಿ ಆಯೊಜಿಸಿತ್ತು. ಕೋವಿಡ್ ವಿಷಮ ಪರಿಸ್ಥಿತಿಯಿಂದ, ಕೋಲಾರ ಜಿಲ್ಲೆಯ ರೈತರಿಗೆ ನೇರವಾಗಲು ಅಂತರ್ಜಾಲದ ಮೂಲಕ ಈ ಮೇಳದ ನೇರ ಪ್ರದರ್ಶನವನ್ನು ವಿಕ್ಷಿಸಿಸಲು ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಹಾಗೂ ತೋಟಗಾರಿಕೆ ಮಹಾವಿದ್ಯಾಲಯ ಕೋಲಾರ ಜಂಟಿಯಾಗಿ, ತೋಟಗಾರಿಕೆ ಮಹಾವಿದ್ಯಾಲಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. 80 ಜನ ರೈತರು ಈ ದಿನಗಳಲ್ಲಿ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು.

## 5 ದಿನಗಳ ತರಬೇತಿ ಕಾರ್ಯಕ್ರಮ

ಕೃಷಿ ವಿಜ್ಞಾನ ಕೇಂದ್ರ, ಕೋಲಾರವು 5 ದಿನಗಳ ಕಾಲ ತರಬೇತಿ ಕಾರ್ಯಕ್ರಮವನ್ನು ಶ್ರೀನಿವಾಸಪುರ ತಾಲ್ಲೂಕಿನ ಚೊಕ್ಕರೆಡ್ಡಿಹಳ್ಳಿಯಲ್ಲಿ ದಿನಾಂಕ 02.02.2021 ರಿಂದ 06.02.2021 ರವರೆಗೆ ಹಮ್ಮಿಕೊಂಡಿತ್ತು. ಈ ತರಬೇತಿಯನ್ನು ಮುಖ್ಯವಾಗಿ ಹಳ್ಳಿಯ ಮಹಿಳೆಯರಗೆ ಮನೆಯಲ್ಲಿಯೇ ಇದ್ದು ಆದಾಯ ಗಳಿಸಲು ಹಮ್ಮಿಕೊಳ್ಳಲಾಗಿತ್ತು. ತ್ಯಾಜ್ಯ ರೇಷ್ಮೆ ಗೂಡಿನಿಂದ ಹಾರ, ಹೂಗುಚ್ಛ, ಹೂಕುಂಡ ಹಾಗೂ ಇತ್ಯಾದಿಗಳನ್ನು ಮನೆಯಲ್ಲಿಯೇ ತಯಾರಿಸಿ ಮಾರಾಟ ಮಾಡಲು ತರಬೇತಿಯನ್ನು ನೀಡಲಾಯಿತು. ಈ ತರಬೇತಿಯಲ್ಲಿ 25 ಜನ ರೈತ ಮಹಿಳೆಯರು ಭಾಗವಹಿಸಿದ್ದರು.






## ಪಶು ಆರೋಗ್ಯ ಶಿಬಿರ



ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಹಾಗು ಸ್ಥಳಿಯ ಪಶು ಚಿಕಿತ್ಸಾಲಯದ ಸಹಯೋಗದಲ್ಲಿ ಶ್ರೀನಿವಾಸಪುರ ತಾಲ್ಲೂಕಿನ ಚೊಕ್ಕರೆಡ್ಡಿಹಳ್ಳಿಯಲ್ಲಿ ದಿನಾಂಕ: 27.01.2021 ರಂದು, ಕೆ.ಜಿ.ಎಫ್. ತಾಲೂಕಿನ ತಿಮ್ಮಸಂದ್ರ ಗ್ರಾಮದಲ್ಲಿ ದಿನಾಂಕ 04.03.2021 ರಂದು ಹಾಗು ಕೋಲಾರ ತಾಲ್ಲೂಕು ಯಡಹಳ್ಳಿ ಗ್ರಾಮದಲ್ಲಿ ದಿನಾಂಕ 20.03.2021 ರಂದು ಪಶು ಆರೋಗ್ಯ ಶಿಬಿರಗಳನ್ನು ಏರ್ಪಡಿಸಲಾಗಿತ್ತು. ಈ ಶಿಬಿರಗಳಲ್ಲಿ ಒಟ್ಟಾಗಿ 510 ಹಸು, 25 ಎಮ್ಮೆ, 265 ಮೇಕೆ ಮತ್ತು 1160 ಕುರಿಗಳಿಗೆ ಜಂತು ನಾಶಕ ಔಷಧಿ ನೀಡಲಾಯಿತು. ಸುಮಾರು 45 ರಾಸುಗಳಿಗೆ ಬಂಜೆತನ ನಿವಾರಣೆ ಚಿಕಿತ್ಸೆ ಹಾಗೂ 20 ರಾಸುಗಳಿಗೆ ಹಾಲಿನಲ್ಲಿ ಕಬ್ಬಿಣಾಂಶ ಹಾಗೂ ಡಿಗ್ರಿ ತಪಾಸಣೆ ಮಾಡಲಾಗಿ ಭಾದೆಗೊಳಪಟ್ಟ ರಾಸುಗಳಿಗೆ ಲವಣ ಮಿಶ್ರಿತ ಪುಡಿಯನ್ನು ನೀಡಲಾಯಿತು. 50 ರಾಸುಗಳಿಗೆ ಸಾಮಾನ್ಯ ತಪಾಸಣೆ ನೆಡೆಸಿ, ಮೇವಿನ ಬೆಳೆಗಳ ಉತ್ಪಾದನೆ ಮತ್ತು ಬಳಕೆ ಬಗ್ಗೆ ಮಾಹಿತಿ ನೀಡಲಾಯಿತು.





## ರೈತರೊಂದಿಗೊಂದು ದಿನ

ಗೌರವಾನ್ವಿತ ಶ್ರೀ. ಬಿ.ಸಿ. ಪಾಟೀಲ, ಕೃಷಿ ಸಚಿವರು, ಕರ್ನಾಟಕ ಸರ್ಕಾರ ರವರ ರೈತರೊಂದಿಗೊಂದು ದಿನವನ್ನು ಕೃಷಿ ಇಲಾಖೆ, ಕೋಲಾರರವರು ವಡ್ಡಹಳ್ಳಿಯಲ್ಲಿ ಆಯೋಜಿಸಿದ ರೈತರೊಂದಿಗೊಂದು ದಿನದಲ್ಲಿ ಕೆವಿಕೆಯ ಎಲ್ಲ ವಿಜ್ಞಾನಿಗಳು ಭಾಗವಹಿಸಿ ವಿಶ್ವವಿದ್ಯಾಲಯದ ನೂತನ ತಂತ್ರಜ್ಞಾನಗಳನ್ನು ಮಳಿಗೆಯಲ್ಲಿ ಪ್ರದರ್ಶಿಸಿದರು. ಜೊತೆಗೆ ಆಲೂಗಡ್ಡೆಯಲ್ಲಿ ಸಸ್ಯ ಸಂರಕ್ಷಣೆ, ಮಣ್ಣು ಪರೀಕ್ಷೆ

ಮತ್ತು ಪರೀಕ್ಷೆಗೆ ಒಳಪಡುವ ಮಣ್ಣನ್ನು ಸಂಗ್ರಹಿಸುವ ವಿಧಾನಗಳ ಕುರಿತು ವಿಷಯ ಮಂಡನೆ ಮಾಡಿದರು ಹಾಗೂ ಆಲೂಗಡ್ಡೆಯಲ್ಲಿ ಸಸ್ಯ ಕಾಂಡಗಳಿಂದ ಬೀಜೋತ್ಪಾದನೆ ಹಾಗು ವೇಸ್ಟ್ ಡಿ ಕಂಪೋಸರನ ಉಪಯೋಗಗಳ ಕುರಿತು ಪ್ರಾತ್ಯಕ್ಷಿಕೆಯನ್ನು ಕೈಗೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಗೌರವಾನ್ವಿತ ಶ್ರೀ. ನಾಗೇಶ್, ಅಬಕಾರಿ ಸಚಿವರು





ಹಾಗೂ ಶ್ರೀ. ಮುನಿಸ್ವಾಮಿ ಗೌರವಾನ್ವಿತ ಸಂಸತ್ ಸದಸ್ಯರು ಈ ತಂತ್ರಜ್ಞಾನಗಳನ್ನು ಪರಿಶಿಲಿಸಿ, ಹೆಚ್ಚಿನ ಮಾಹಿತಿ ಪಡೆದರು.

## ರಾಷ್ಟೀಯ ತೋಟಗಾರಿಕೆ ಮೇಳ

ರಾಷ್ಟೀಯ ತೋಟಗಾರಿಕೆ ಮೇಳವನ್ನು ದಿನಾಂಕ 08.02.2021 ರಿಂದ 12–02–2021 ರವರೆಗೆ ಹೆಸರಘಟ್ಟ ಬೆಂಗಳೂರಿನಲ್ಲಿ ಭಾರತೀಯ ತೋಟಗಾರಿಕಾ ಅನುಸಂಧಾನ ಸಂಸ್ಥೆಯು ಆಯೋಜಿಸಿತ್ತು. ಈ ಮೇಳದಲ್ಲಿ ವಿಶ್ವವಿದ್ಯಾಲಯದ ಇತರೇ ಕೇಂದ್ರಗಳ ಜೊತೆಗೂಡಿ ಕೃಷಿ ವಿಜ್ಞಾನ ಕೇಂದ್ರವು ವಿಶ್ವವಿದ್ಯಾಲಯದ ವಿವಿಧ ನೂತನ ಅವಿಷ್ಕಾರಗಳನ್ನು ಈ ಮಳಿಗೆಯಲ್ಲಿ ಪ್ರದರ್ಶಿಸಿತು. ಈ ಮಳಿಗೆಗೆ ಶ್ರೀ. ರಾಜೇಂದ್ರಕುಮಾರ ಕಟಾರಿ, ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ, ಕುಮಾರಿ ಫೌಜೀಯಾ ತರಾನಾ, ನಿರ್ದೇಶಕರು, ತೋಟಗಾರಿಕೆ ಇಲಾಖೆ ಭೇಟಿ ನೀಡಿ ನೂತನ ತಂತ್ರಜ್ಞಾನಗಳ ಕುರಿತು ಮಾಹಿತಿ ಪಡೆದರು. ಡಾ. ಕೆ.ಎಂ. ಇಂದಿರೇಶ್, ಗೌರವಾನ್ವಿತ ಕುಲಪತಿಗಳು, ತೋ.ವಿ.ವಿ ಬಾಗಲಕೋಟೆ ಹಾಗೂ ಡಾ. ಎಸ್.ಐ, ಅಥಣಿ, ವಿಸ್ತರಣಾ ನಿರ್ದೇಶಕರು, ತೋ.ವಿ.ವಿ. ಬಾಗಲಕೋಟೆರವರು ಮಳಿಗೆಗೆ ಭೇಟಿ ನೀಡಿ ಸಲಹೆಗಳನ್ನು ನೀಡಿದರು. ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ವಿಜ್ಞಾನಿಗಳು ವಿವಿಧ ದಿನಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿವುದರ ಜೊತೆಗೆ ಕೋಲಾರ ಜಿಲ್ಲೆಯ ರೈತರಿಗೆ ಅಧ್ಯಯನ ಪ್ರವಾಸವನ್ನು ಆಯೋಜಿಸಿದ್ದರು.






## ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ –2021

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ಧಾನ್ ಫೌಂಡೇಶನ್, ಕೃಷಿ ಇಲಾಖೆ, ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ ಇವರ ಸಂಯುಕ್ತಾಶ್ರಯದಲ್ಲಿ "ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ –2021" ದ ಕುರಿತು ಕೃಷಿ ವಿಜ್ಞಾನ ಕೇಂದ್ರ, ಕೋಲಾರದಲ್ಲಿ ದಿನಾಂಕ: 08.03.2021 ರಂದು ಹಮ್ಮಿಕೊಳ್ಳಲಾಗಿತ್ತು. ಈ ವರ್ಷದ ಘೋಷವಾಕ್ಯ "ಕೃಷಿಯಲ್ಲಿ ಮಹಿಳಾ ನಾಯಕತ್ವ: ಉದ್ಯಮಶೀಲತೆ, ಸಮಾನತೆ ಮತ್ತು ಸಬಲೀಕರಣ"ಗೊಂಡ ಶ್ರೀಮತಿ. ಸಿಂಪು ಕೆ.ಜಿ.ಎಫ್ ಹಾಗೂ ಶ್ರೀಮತಿ ಪ್ರಮೀಳ, ಬಂಗಾರಪೇಟೆ ಇವರು ಕೆವಿಕೆಯಲ್ಲಿ 30 ದಿನಗಳ ತರಬೇತಿಯನ್ನು ಪಡೆದು ಸ್ವ–ಉದ್ಯೋಗ ಪ್ರಾರಂಭಿಸಿ ಉದ್ಯಮಶೀಲರಾಗಿರುತ್ತಾರೆ. ಅಂತರರಾಷ್ಟ್ರೀಯ

ಮಹಿಳಾ ದಿನಾಚರಣೆ ಪ್ರಯುಕ್ತ ಇವರಿಬ್ಬರಿಗೂ ಕೃಷಿ ವಿಜ್ಞಾನ ಕೇಂದ್ರ ವತಿಯಿಂದ ಸನ್ಮಾನಿಸಲಾಯಿತು. ಜೊತೆಗೆ 3 ರೈತಮಹಿಳೆಯರನ್ನು ಕೃಷಿ ಇಲಾಖೆಯಿಂದ ಸನ್ಮಾನಿಸಲಾಯಿತು. ಸುಮಾರು 174 ರೈತ ಮಹಿಳೆಯರು ಭಾಗವಹಿಸಿ ಸಬಲೀಕರಣ ಕುರಿತು ಮಾಹಿತಿ ಪಡೆದುಕೊಂಡರು.

## ವಿಶ್ವ ನೀರು ದಿನಾಚರಣೆ

ವಿಶ್ವ ನೀರು ದಿನಾಚರಣೆಯನ್ನು ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ದಿನಾಂಕ 22.03.2021 ರಂದು ಆತ್ಮ, ಕೃಷಿ ಇಲಾಖೆ, ಕೋಲಾರ ಸಹಯೋಗದಲ್ಲಿ ಆಯೋಜಿಸಲಾಗಿತ್ತು. ತೋಟಗಾರಿಕೆ ಬೆಳೆಗಳಲ್ಲಿ ನೀರಿನ ನಿರ್ವಹಣೆ, ವೇಸ್ಟ್ ಡಿಕಂಪೋಸರ್‌ನ ಉಪಯೋಗಗಳು ಮತ್ತು ಹವಾಮಾನ ಆಧಾರಿತ ಕೃಷಿಯ ಬಗ್ಗೆ ವಿಜ್ಞಾನಿಗಳು ಚರ್ಚಿಸಿದರು. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ 40 ರೈತರು ಭಾಗವಹಿಸಿದ್ದರು.




## ಹೊರಾಂಗಣದಲ್ಲಿ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮಗಳು:

| ಅ.ನಂ | ದಿನಾಂಕ | ವಿಷಯ | ಸ್ಥಳ | ಭಾಗವಹಿಸಿದವರ ಸಂಖೆ |
|---|---|---|---|---|
| 1 | 12.01.2021 | ಕ್ರಿಮಿನಾಶಕಗಳ ಸುರಕ್ಷಿತ ಬಳಕೆ ಹಾಗೂ ಬಿಜೋಪಚಾರ | ವೇಮಗಲ್ | 45 |
| 2 | 15.01.2021 | ಆಲೂಗಡ್ಡೆ ಹಾಗೂ ಟೊಮ್ಯಾಟೊ ಬೆಳೆಯ ಆಧುನಿಕ ಬೇಸಾಯ ಕ್ರಮಗಳು ಮತ್ತು ವೇಸ್ಟ್ ಡಿ ಕಂಪೋಸರನ ಉಪಯೋಗಗಳು | ಶಿಳ್ಳಂಗೆರೆ | 30 |
| 3 | 16.01.2021 | ಮಾವಿನಲ್ಲಿ ಸಾವಯವ ಪದ್ಧತಿಯಿಂದ ಸಸ್ಯಸಂರಕ್ಷಣೆ | ತೊಟ್ಲಿಗಾನಹಳ್ಳಿ | 20 |
| 4 | 18.01.2021 | ಉತ್ತಮ ಗುಣಮಟ್ಟದ ಹಿಪ್ಪುನೇರಳೆ ಉತ್ಪಾದನೆಯಲ್ಲಿ ರೇಷ್ಮೆ ತ್ಯಾಜ್ಯದಿಂದ ಉತ್ಪಾದಿಸಿದ ಗೊಬ್ಬರದ ಪ್ರಾಮುಖ್ಯತೆ | ಮದ್ದೆತೆ | 75 |
| 5 | 21.01.2021 | ಅಧಿಕ ಆದಾಯದ ದ್ವಿತಳಿ ರೇಷ್ಮೆಯಿಂದ ರೈತರ ಆದಾಯ ದ್ವಿಗುಣಗೊಳಿಸುವಿಕೆ | ಕಾಡುದೇವಾಂಡಹಳ್ಳಿ | 50 |








| ಅ.ನಂ | ದಿನಾಂಕ | ವಿಷಯ | ಸ್ಥಳ | ಭಾಗವಹಿಸಿದವರ ಸಂಖ್ಯೆ |
|---|---|---|---|---|
| 6 | 22.01.2021 | ಅಧಿಕಾ ಆದಾಯದ ದ್ವಿತಳಿ ರೇಷ್ಮೆಯಿಂದ ರೈತರ ಆದಾಯ ದ್ವಿಗುಣಗೊಳಿಸುವಿಕೆ | ಕುಪ್ಪನಹಳ್ಳಿ | 125 |
| 7 | 23.01.2021 | ಮಣ್ಣಿನ ಫಲವತ್ತತೆ ಹಾಗೂ ಕೃಷಿಯಲ್ಲಿ ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ಪೋಷಕಾಂಶಗಳ ನಿರ್ವಹಣೆ | ಗೊಲ್ಲಹಳ್ಳಿ | 50 |
| 8 | 25.01.2021 | ದ್ವಿತಳಿ ರೇಷ್ಮೆಯಲ್ಲಿ ಆಧುನಿಕ ತಂತ್ರಜ್ಞಾನಗಳು | ಕೂಲಗುರಕಿ | 85 |
| 9 | 29.01.2021 | ಹೂಬಿಡುವ ಸಮಯದಲ್ಲಿ ಮಾವಿನಲ್ಲಿ ಕೈಗೊಳ್ಳಬೇಕಾದ ಉತ್ತಮ ಬೇಸಾಯ ಕ್ರಮಗಳು | ಸಾತಾಂಡ್ಲಹಳ್ಳಿ | 30 |
| 10 | 30.01.2021 | ಮಾವಿನಲ್ಲಿ ಅಧಿಕ ಇಳುವರಿಗಾಗಿ ವರ್ಷವಿಡಿ ಕೈಗೊಳ್ಳಬೇಕಾದ ಕ್ರಮಗಳು ಮತ್ತು ವಿವಿಧ ಮಾರುಕಟ್ಟೆ ಸೌಲಭ್ಯಗಳು | ಚೊಕ್ಕರೆಡ್ಡಿಹಳ್ಳಿ | 50 |









| ಅ.ನಂ | ದಿನಾಂಕ | ವಿಷಯ | ಸ್ಥಳ | ಭಾಗವಹಿಸಿದವರ ಸಂಖ್ಯೆ |
|---|---|---|---|---|
| 11 | 02.02.2021 | ಮಾವು ಹಾಗೂ ಟೊಮ್ಯಾಟೊ ಬೆಳೆಯಲ್ಲಿ ಸಮಗ್ರ ರೋಗ & ಕೀಟಗಳ ನಿರ್ವಹಣೆ | ಸಾತಾಂಡ್ಲಹಳ್ಳಿ | 65 |
| 12 | 04.02.2021 | ಮಾವಿನ ಸಮಗ್ರ ಬೆಳೆ ನಿರ್ವಹಣೆ | ಚೊಕ್ಕರೆಡ್ಡಿಹಳ್ಳಿ | 30 |
| 13 | 05.02.2021 | ಮಾವು ಹಾಗೂ ಟೊಮ್ಯಾಟೊ ಬೆಳೆಯಲ್ಲಿ ಸಮಗ್ರ ರೋಗ & ಕೀಟಗಳ ನಿರ್ವಹಣೆ | ರೋಣುರು | 50 |
| 14 | 16.02.2021 | ಹೆಚ್ಚಿನ ಇಳುವರಿಗಾಗಿ ಹಿಪ್ಪುನೇರಳೆಯ ಉತ್ಪಾದನಾ ತಾಂತ್ರಿಕತೆಗಳು | ಕನುಮನಹಳ್ಳಿ | 80 |
| 15 | 19.02.2021 | ಬೇಸಿಗೆಯಲ್ಲಿ ರೇಷ್ಮೆಹುಳುಗಳ ನಿರ್ವಹಣೆ | ಯಲವಾಲ | 40 |











| ಅ.ನಂ | ದಿನಾಂಕ | ವಿಷಯ | ಸ್ಥಳ | ಭಾಗವಹಿಸಿದವರ ಸಂಖ್ಯೆ |
|---|---|---|---|---|
| 16 | 25.02.2021 | ದ್ವಿತಳಿ ರೇಷ್ಮೆ ಪಾಲನೆಯಲ್ಲಿ ಆಧುನಿಕ ತಂತ್ರಜ್ಞಾನಗಳು | ಮುಳಬಾಗಿಲು | 80 |
| 17 | 26.02.2021 | ದ್ವಿತಳಿ ರೇಷ್ಮೆಪಾಲನೆಯಲ್ಲಿ ಸಮಗ್ರ ರೋಗಗಳ ನಿರ್ವಹಣೆ | ದೇವೆನಹಳ್ಳಿ | 50 |
| 18 | 09.03.2021 | ಸೊಲನೆಸಿಯಸ್ ಬೆಳೆಗಳ ಸಮಗ್ರ ನಿರ್ವಹಣೆ | ಚೊಕ್ಕರೆಡ್ಡಿಹಳ್ಳಿ | 30 |
| 19 | 10.03.2021 | ಗುಣಮಟ್ಟದ ಹಿಪ್ಪುನೇರಳೆ ಮತ್ತು ಗೂಡುಗಳ ಉತ್ಪಾದನೆಗೆ ಉತ್ತಮ ಪದ್ಧತಿಗಳು | ಮಣಿಗಟ್ಟ | 30 |
| 20 | 16.03.2021 | ಮಾವಿನಲ್ಲಿ ಸಮಗ್ರ ಪೀಡೆ ನಿರ್ವಹಣೆ | ಚೊಕ್ಕರೆಡ್ಡಿಹಳ್ಳಿ | 35 |







| ಅ.ನಂ | ದಿನಾಂಕ | ವಿಷಯ | ಸ್ಥಳ | ಭಾಗವಹಿಸಿದವರ ಸಂಖ್ಯೆ |
|---|---|---|---|---|
| 21 | 17.03.2021 | ರೈತರ ಕಲ್ಯಾಣಕ್ಕಾಗಿ ಸಾವಯವ ಹಿಪ್ಪುನೇರಳೆ ಬೇಸಾಯ | ಕೆ. ವಿ.ಕೆ.,ಕೋಲಾರ | 50 |
| 22 | 18.03.2021 | ಉತ್ತಮ ಗುಣಮಟ್ಟದ ಗೂಡುಗಳಿಗಾಗಿ ಹಿಪ್ಪುನೇರಳೆಯಲ್ಲಿ ಸಾವಯವ ಗೊಬ್ಬರಗಳ ಮೂಲಕ ಪೋಷಕಾಂಶಗಳ ನಿರ್ವಹಣೆ | ಕಜ್ಜಿಕಾಲಹಳ್ಳಿ | 30 |
| 23 | 23.03.2021 | ಕೃಷಿಯಲ್ಲಿ ಮಣ್ಣು ಪರೀಕ್ಷೆಯ ಮಹತ್ವ | ಜೋಡಿಕೃಷ್ಣಪುರ | 30 |
| 24 | 23.03.2021 | ಹಿಪ್ಪುನೇರಳೆ ಇಳುವರಿ ಹೆಚ್ಚಿಸಲು ಸಮಗ್ರ ಬೆಳೆ ನಿರ್ವಹಣೆ | ಮೈಲಾಂಡಹಳ್ಳಿ | 30 |










## ಒಳಾಂಗಣದಲ್ಲಿ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮಗಳು

| ಅ.ನಂ | ದಿನಾಂಕ | ವಿಷಯ | ಭಾಗವಹಿಸಿದವರ ಸಂಖ್ಯೆ |
|---|---|---|---|
| 1 | 02.01.2021 | ಆಲೂಗಡ್ಡೆ ಬೇಸಾಯ ಕ್ರಮಗಳು ಮತ್ತು ಎರೆಹುಳು ಗೊಬ್ಬರದ ಉತ್ಪಾದನೆ | 50 |
| 2 | 11.01.2021 | ಸಮಗ್ರ ಬೆಳೆ ಹಾಗೂ ಕೊಯ್ಲೋತ್ತರ ನಿರ್ವಹಣೆ, ಮಣ್ಣು ಪರೀಕ್ಷೆ, ಮೇಘದೂತ್ ಆಪ್‌ಗಳ ಬಳಕೆ, ಸಸ್ಯ ಸಂರಕ್ಷಕಗಳ ಸುರಕ್ಷಿತ ಬಳಕೆ | 50 |
| 3 | 10.02.2021 | ಗುಣಮಟ್ಟದ ಹಿಪ್ಪುನೇರಳೆ ಉತ್ಪಾದನೆಗಾಗಿ ಸಾವಯವ ಗೊಬ್ಬರಗಳ ಉತ್ಪಾದನೆ | 60 |
| 4 | 18.03.2021 | ಗುಣಮಟ್ಟದ ರೇಷ್ಮೆಗೂಡಿನ ಉತ್ಪಾದನೆಯಲ್ಲಿ ಸಾವಯವ ಪದ್ಧತಿಯಿಂದ ಪೋಷಕಾಂಶಗಳ ನಿರ್ವಹಣೆ | 65 |
| 5 | 17.03.2021 | ರೈತರ ಕಲ್ಯಾಣದಲ್ಲಿ ಸಾವಯವ ಕೃಷಿಯ ಪ್ರಾಮುಖ್ಯತೆ | 50 |
| 6 | 04.03.2021 | ಕಾರ್ಯದಕ್ಷತೆ ಪಂಪ್‌ಸೆಟ್‌ಗಳ ಬಳಕೆ ಮತ್ತು ನೀರಿನ ಸಂರಕ್ಷಣೆ | 75 |
| 7 | 02.03.2021 | ತೆಂಗಿನಲ್ಲಿ ರೂಗೋಸ್ ಬಿಳಿ ನೊಣಗಳ ನಿರ್ವಹಣೆ | 50 |











## ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ವಿವಿಧ ತರಬೇತಿ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿರುವ ವಿವರ:

| ಅ.ನಂ | ದಿನಾಂಕ | ವಿಷಯ | ಸ್ಥಳ | ಆಯೋಜಕರು |
|---|---|---|---|---|
| 1 | 01.01.2021 | ಕೃಷಿಯಲ್ಲಿ ಉದ್ಯಮಶೀಲತೆಗೆ ಎರೆಹುಳು ಗೊಬ್ಬರದ ಪ್ರಾಮುಖ್ಯತೆ. | ಹೊನ್ನೆನಹಳ್ಳಿ, ಕೋಲಾರ | ಕೆನರಾ ಬ್ಯಾಂಕ್, ಸ್ವ ಉದ್ಯೋಗ ತರಬೇತಿ ಸಂಸ್ಥೆ |
| 2 | 23.01.2021 | ರೈತರ ಆದಾಯ ದ್ವಿಗುಣಗೊಳಿಸಲು ತೊಗರಿಯಲ್ಲಿ ಆಧುನಿಕ ಉತ್ಪಾದನಾ ಕ್ರಮಗಳು | ಕೂಡಿಗೇನಹಳ್ಳಿ | ಕೃಷಿ ಇಲಾಖೆ, ಮುಳಬಾಗಿಲು |
| 3 | 25.01.2021 | ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಜೈವಿಕ ಗೊಬ್ಬರಗಳ ಉಪಯೋಗ | ಮಾಲೂರು | ತೋಟಗಾರಿಕೆ ಇಲಾಖೆ, ಮಾಲೂರು |
| 4 | 29.01.2021 | ಟೊಮ್ಯಾಟೊ ಬೆಳೆಯ ಮೌಲ್ಯವರ್ಧನೆ ಹಾಗೂ ಸಂಸ್ಕರಣೆ | ರಾಯಲಪಾಡು | ತೋಟಗಾರಿಕೆ ಇಲಾಖೆ, ಶ್ರೀನಿವಾಸಪುರ |
| 5 | 29.01.2021 | ಮಾವಿನಲ್ಲಿ ಹೂಬಿಡುವ ಸಮಯದಲ್ಲಿ ಕೈಗೊಳ್ಳಬೇಕಾದ ಕ್ರಮಗಳು | ಸಂತೇನಹಳ್ಳಿ | ತೋಟಗಾರಿಕೆ ಇಲಾಖೆ, ಮಾಲೂರು |











## ಸಮಸ್ಯಾತ್ಮಕ ಕ್ಷೇತ್ರಗಳಿಗೆ ಭೇಟಿ

| ಅ.ನಂ | ದಿನಾಂಕ | ಬೆಳೆ | ಸಮಸ್ಯೆ | ಸ್ಥಳ |
|---|---|---|---|---|
| 1 | 01.01.2021 | ಹಿಪ್ಪುನೇರಳೆ | ಕಾಂಡ ಕೊಳೆ ರೋಗ ಬಾಧಿತ ಬೆಳೆ | ಭಟ್ರಹಳ್ಳಿ |
| 2 | 12.01.2021 | ದಾಳಿಂಬೆ | ದುಂಡಾಣು ಸೊರಗು ರೋಗ | ಪಾರೆಹೊಸಹಳ್ಳಿ |
| 3 | 29.01.2021 | ಹಿಪ್ಪುನೇರಳೆ | ಕಾಂಡ ಕೊರಕ ಹಾಗೂ ತೊಗಟೆ ತಿನ್ನುವ ಹುಳು ಭಾದಿತ ತೋಟ | ಬಲಾಗೆರೆ |
| 4 | 11.02.2021 | ಮಾವು | ಹೂ ಅಂಗಮಾರಿ ರೋಗ ಪೀಡಿತ ತೋಟ | ಕುಡುವನಹಳ್ಳಿ, ಅನ್ನಹಳ್ಳಿ |
| 5 | 23.03.2021 | ಡೊಣ್ಣೆ ಮೆಣಸಿನಾಕಾಯಿ | ತ್ರಿಪ್ಸ್ ಬಾಧಿತ ತೋಟ ಹಾಗೂ ಗಿಡದ ಆಕಾರ ನಿರ್ವಹಣೆ ಇಲ್ಲದಿರುವುದು | ಹೊಸಮಟ್ಟನಹಳ್ಳಿ |





## ಕ್ಷೇತ್ರ ಭೇಟಿಗಳು

| ಅ.ನಂ | ದಿನಾಂಕ | ವಿಷಯ | ಸ್ಥಳ |
|---|---|---|---|
| 1 | 09.01.2021 | ವೇದಿಕ್ ಆಹಾರ ಮೌಲ್ಯವರ್ಧನೆ ಘಟಕ | ಗುಂಡಮನತ್ತ |
| 2 | 12.01.2021 | ಮಾವು ಮತ್ತು ಸೀಬೆ ಬೆಳೆಗಳ ನಿರ್ವಹಣೆ | ಪಾರೆಹೊಸಹಳ್ಳಿ |
| 3 | 13.01.2021 | ಲಭ್ಯವಿರುವ ಆಧುನಿಕ ತಂತ್ರಜ್ಞಾನಗಳ ಕುರಿತು ವಿಚಾರ ವಿನಿಮಯ | ಪಶುಮಹಾವಿದ್ಯಾಲಯ ಹಾಗೂ ತೋಟಗಾರಿಕೆ ಇಲಾಖೆ, ಬೆಂಗಳೂರು. |
| 4 | 15.01.2021 | ಮಾವಿನಲ್ಲಿ ಹೂ ಬೆಳವಣಿಗೆ ಹಾಗೂ ಚಿಬ್ಬು ರೋಗದ ನಿರ್ವಹಣೆ | ಗರುಡಪಾಳ್ಯ, ನರಸಾಪುರ |
| 5 | 15.01.2021 | ಗಜ್ಜರಿಯಲ್ಲಿ ಅಂಗಮಾರಿ ರೋಗದ ನಿರ್ವಹಣೆ | ಶಿಳ್ಳಂಗೆರೆ |
| 6 | 18.01.2021 | ನೂತನ ಹಿಪ್ಪುನೇರಳೆ ತೋಟದ ಸ್ಥಾಪನೆ | ಮದ್ದೇರಿ |







## ಕ್ಷೇತ್ರೋತ್ಸವ

| ಅ.ನಂ | ದಿನಾಂಕ | ವಿಷಯ | ಸ್ಥಳ |
|---|---|---|---|
| 1 | 29.01.2021 | ಹೆಚ್ಚುವರಿ ಆದಾಯಕ್ಕಾಗಿ ಮರಪದ್ಧತಿ ಹಿಪ್ಪುನೇರಳೆಯಲ್ಲಿ ಅಂತರ ಬೆಳೆಯಾಗಿ ಅವರೆ | ಚಿಟ್ನಹಳ್ಳಿ |



## ಪದ್ಧತಿ ಪ್ರಾತ್ಯಕ್ಷಿಕೆಗಳು

| ಅ.ನಂ | ದಿನಾಂಕ | ವಿಷಯ | ಸ್ಥಳ |
|---|---|---|---|
| 1 | 11.02.2021 | ಮಾವಿನಲ್ಲಿ ಹಣ್ಣು ನೊಣಗಳ ನಿರ್ವಹಣೆಗಾಗಿ ಲಿಂಗಾರ್ಷಕ ಬಲೆಗಳ ಬಳಕೆ | ಕಾಡುದೇವಾಂಡಹಳ್ಳಿ |
| 2 | 16.03.2021 | ಮಾವಿನಲ್ಲಿ ಉತ್ತಮ ಇಳುವರಿಗಾಗಿ ಮಾವು ಸ್ಪೇಶಲ್‌ನ ಬಳಕೆ | ಚೊಕ್ಕರೆಡ್ಡಿಹಳ್ಳಿ |

## ಗುಂಪು ಚರ್ಚೆಗಳು

| ಅ.ನಂ | ದಿನಾಂಕ | ಸ್ಥಳ | ವಿಷಯ |
|---|---|---|---|
| 1 | 09.01.2021 | ಚೊಕ್ಕರೆಡ್ಡಿಹಳ್ಳಿ | ಎಸ್.ಸಿ.ಎಸ್.ಪಿ ಕಾರ್ಯಕ್ರಮದಡಿಯಲ್ಲಿ 10 ದಿನಗಳ ಕಾಲ ತರಬೇತಿಯನ್ನು ಆಯೋಜಿಸುವ ಕುರಿತು |
| 2 | 16.02.2021 | ತಿಪ್ಪಸಂದ್ರ | 2021-22ನೇ ಸಾಲಿನಲ್ಲಿ ಕ್ರಿಯಾ ಯೋಜನೆಗಳನ್ನು ರೂಪಿಸಲು ವಿವಿಧ ಬೆಳೆಗಳಲ್ಲಿ ಹಾಗೂ ಮುಖ್ಯ ಸಮಸ್ಯೆಗಳ ಕುರಿತು ಗ್ರಾಮದ ರೈತರ ಅನುಭವ |
| 3 | 18.02.2021 | ಕಾಡುದೇವಾಂಡಹಳ್ಳಿ | |
| 4 | 22.02.2021 | ತಿಮ್ಮಸಂದ್ರ | |






## ರೇಡಿಯೋ ಕಾರ್ಯಕ್ರಮಗಳು

ನಮ್ಮ ಧ್ವನಿ -ಮೈರಾಡ್ ಸಮುದಾಯ ರೇಡಿಯೋ ರವರು ಆಯೋಜಿಸಿದ ಸಂವಾದಾತ್ಮಕ ಕಾರ್ಯಕ್ರಮದಲ್ಲಿ ಡಾ. ಅಂಬಿಕಾ ಡಿ.ಎಸ್ ಮತ್ತು ಡಾ. ಜ್ಯೋತಿ ಕಟ್ಟೆಗೌಡರ ವಿಜ್ಞಾನಿಗಳು ಭಾಗವಹಿಸಿ ಕೈತೋಟ/ ತಾರಸಿ ತೋಟದ ಸ್ಥಾಪನೆ ಹಾಗೂ ನಿರ್ವಹಣೆಯ ಕುರಿತು ದಿನಾಂಕ 25.03.2021 ರಂದು ತಿಳಿಸಿಕೊಟ್ಟರು.




| | |
|---|---|
| ಸಂಪಾದಕರು | : ಕೆ. ತುಳಸಿರಾಮ್ |
| ಸಹ ಸಂಪಾದಕರು | : ಡಾ. ಜ್ಯೋತಿ ಕಟ್ಟೇಗೌಡರ |
| ಸಹಾಯಕ ಸಂಪಾದಕರು | ಡಾ. ಅನೀಲ್ ಕುಮಾರ್. ಎಸ್.<br>ಡಾ. ಅಂಬಿಕಾ ಡಿ. ಎಸ್.<br>ಡಾ. ಶಶಿಧರ್ ಕೆ.ಆರ್<br>ಡಾ. ಚಿಕ್ಕಣ್ಣ ಜಿ.ಎಸ್<br>ಶ್ರೀ. ಉಮೇಶ ನಾಯ್ಕ<br>ಸ್ವಾತಿ ಜಿ. ಆರ್. |
| ಪುಟ ವಿನ್ಯಾಸ | : ಸಿ.ಎಸ್. ಜ್ಞಾನಸುಧಾ |
| ಅಕ್ಷರ ಜೋಡಣೆ | : ಸಾವಿತ್ರಿ ಜಿ. ರುದ್ರಾಪೂರ |
| ಸಹಾಯಕರು | : ರವಿಶಂಕರ್ ಹೆಚ್.ಎಂ. |

ಪ್ರಕಾಶಕರು
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು,
ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರ,
ಕೋಲಾರ- 563 103.





ಪ್ರತಿ ಸೋಮವಾರ ರೈತರಿಗೆ ಪರಿಹಾರ
ಸ್ಥಳ: ಕೃಷಿ ವಿಜ್ಞಾನ ಕೇಂದ್ರ ಕೋಲಾರ.
ಸಮಯ: ಬೆಳಿಗ್ಗೆ 9.00 ರಿಂದ ಸಂಜೆ: 5.00